ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 14, ಸನ್ 1909.

II ನೇ ಬಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತಫ್ಸೀ.

ಸನ್ 1908ನೆ ಇಸವಿ ಡಿಸೆಂಬರ್ 22ನೆ ಮುಕ್ತಂ 81ನೆ ನಂಬರು, ರೂಲ್ ಆಫ್ ಪ್ರಾಕ್ಟಿಸ್.

ಆರ್ಡರ್ ಷೀಟನ್ನ ಇಡುವ ವಿಚಾರದಲ್ಲಿ, ಛೀಫ್ ಕೋರ್ಟಿನವರು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡು 554ನೆ ಸೆಕ್ಷನ್ ಅನುಸರಿಸಿ, ಗವರ್ನ್ಮೆಂಟಿನವರ ಸಮ್ಮತಿಯಿಂದ, ಈ ಕೆಳಗೆ ನಮೂದು ಮಾಡಿರುವ ರೂಲ್ಸನ್ನು ಏರ್ಪಡಿಸಿ, ವಿಧಾಯಕ ಮಾಡಿರುತ್ತಾರೆ.

1. ಎಲ್ಲಾ ಕ್ರಿಮಿನಲ್ ಕೋರ್ಟುಗಳಲ್ಲಿಯೂ, ಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಕಂಡಂತೆ, ಬಂದು ಆರ್ಡರ್ ಷೀಟನ್ನು ರೆಗ್ಯುಲರ್ ಯಾ ವಿಸಲೇನಿಯಸ್ ಮೊಕದ್ದಮೆಗಳಲ್ಲೆಲ್ಲಾ ಇಡತಕ್ಕದ್ದು.

2. ವಿಚಾರಣೆ ಶುರುವಾದ ಲಾಗಾಯತು ಆಖೈರು ಆಗುವ ವರಿವಿಗೂ ನಡೆದ ನಡವಳಿಕೆಗಳನ್ನೆಲ್ಲಾ ಕಾಲಕ್ರಮಾನುಸಾರವಾಗಿ ಆರ್ಡರ್ ಷೀಟಿನಲ್ಲಿ ಪೂರ್ತಿಯಾಗಿ ಬರದಿರಬೇಕು; ಮತ್ತು ವಿಚಾರಣೆ ಕಾಲದಲ್ಲಿ ಆದ ಪ್ರತಿಬಂದು "ಇಂಟರ್‌ಲುಕ್ಯುಟರಿ ಆರ್ಡರನ್ನ" (ವಿಚಾರಣೆ ಶುರುವಾದ ಮೇಲೆ ಜಡ್ಜ್‌ಮೆಂಟು ಹೇಳುವದಕ್ಕೆ ಪೂರ್ವ ಮಾಡಿದ ಆರ್ಡರನ್ನು) ಇದರಲ್ಲಿ ನಮೂದಿರಬೇಕು. ಇದನ್ನು ಕಟ್ಟಿನ "ಫೇಸಿಂಗ್‌ಷೀಟ್" ಮುಖಫರ್ದಿನ (ಕಾಗದದ) ಬಾಜೂದಲ್ಲಿಯೆ ಇಡತಕ್ಕದ್ದು.

3. "ಛೀಫ್ ಮಿನಿಸ್ಟೀರಿಯಲ್ ಆಫಿಸರ್" (ಮುಖ್ಯ ನೌಕರು) ಆರ್ಡರು ಷೀಟನ್ನು ಬರಿಯಬಹುದು; ಆದರೆ ಜಡ್ಜಿಯಾ ಮ್ಯಾಜಸ್ಟ್ರೇಟರು (ಆರ್ಡರು ಷೀಟಿನಲ್ಲಿ) ಬರದಿರತಕ್ಕದ್ದು ಸರಿಯಾಗಿ ಇದೆ ಎಂದು ನಿರ್ಧರಪಡಿಸಿಕೊಂಡನಂತರ ಆಯಾಯ ದಿನದ ನಡವಡಿಕೆಗಳ ಕೆಳಭಾಗದಲ್ಲಿ ರುಜು ಮಾಡತಕ್ಕದ್ದು.

4. "ಸನ್ 1885ನೆ ಇಸವಿ ನವಂಬರು 20ನೆ ಮುಕ್ತಂ 42ನೆ ನಂಬರು, 1887ನೆ ಇಸವಿ ಜೂನ್ 16ನೆ ಮುಕ್ತಂ 47ನೆ ನಂಬರು, ಮತ್ತು 1891ನೆ ಇಸವಿ ಮೇ 23ನೆ ಮುಕ್ತಂ 55ನೆ ನಂಬರು ರೂಲ್ಸ್ ಆಫ್ ಪ್ರಾಕ್ಟಿಸ್‌ಗಳು ಮತ್ತು 1897ನೆ ಇಸವಿ ಆಗಸ್ಟು 6ನೆ ಮೆಕ್ರಂ 137ನೆ ನಂಬರು ಸರ್‌ಕ್ಯುಲರ್ ಲೆಟರು ಸಹ ಈ ಮೂಲಕ ರದ್ದು ಮಾಡಲ್ಪಟ್ಟಿರುತ್ತವೆ.

ಆರ್ಡರ್ ಷೀಟ್.

.....ಕೋರ್ಟಿನಲ್ಲಿ.....190.....ನೇ ಇಸವಿ.....ನೆ ನಂಬರು

ಫಿರ್ಯಾದಿ.....ಅಪರಾದಿ.

ಆರ್ಡರಿನ ಜಂಜರ್ ನಂಬರ್.	ಪ್ರೊಸಿಡಿಂಗ್ಸಿನ ಯಾ ಆರ್ಡರಿನ ತಾರೀಖು.	ಆರ್ಡರ್ ಯಾ ಪ್ರೊಸಿಡಿಂಗ್ಸ್ ಜಡ್ಜಿಯವರ ದಸ್ತಖತ್ತು.	ಕಕ್ಷಿಗಾರರ ಯಾ ಅವಕ್ಯ ಬಿದ್ದಲ್ಲಿ ಪ್ಲೀಡರ್‌ಗಳ ರುಜು.

ನಿಶಿ.

ತಮ್ಮ ವಿಧೇಯ,
ಏ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.